ಮಹಾರಾಣಿಗೆ ಇಷ್ಟವಾಗಲಿಲ್ಲ. "ಅವನನ್ನು ಎಲ್ಲಿಗಾದರೂ ಗಡಿಪಾರು ಮಾಡಿ. ಅವನ ಅದೃಷ್ಟವಿದ್ದಂತಾಗುತ್ತದೆ. ನನ್ನ ಮಗ ಕಗ್ಗತ್ತಲ ಕೋಣೆಯಲ್ಲಿ ಹಾಸುಗಲ್ಲಿನ ಮೇಲೆ ಮಲಗಿ ನಿದ್ದೆಯಿಲ್ಲದೆ ಹೊರಳುವಾಗ ಹೇಗೆ ಹಂಸಮಾಲಿಕಾ ತಲ್ಪದಲ್ಲಿ ನಿದ್ದೆ ಬಂದೀತು?" ಮಹಾರಾಜ ರಾತ್ರಿ ಇಡೀ ಯೋಚಿಸಿದ. ಮರುದಿನ ಮಂತ್ರಿಗೆ ಆದೇಶಿಸಿದ.

"ನೂರು ಜನ ಪ್ರಯಾಣಿಸಬಲ್ಲ ಒಂದು ಹಾಯಿ ಹಡಗನ್ನು ಸಿದ್ಧಪಡಿಸಿ."

ಹಡಗು ಸಿದ್ಧಗೊಂಡಿತು. ಅದರಲ್ಲಿ ನೂರು ಜನಕ್ಕೆ ಒಂದು ತಿಂಗಳಿಗೆ ಬೇಕಾದಷ್ಟು ಆಹಾರ ಪದಾರ್ಥ, ಕುಡಿಯುವ ನೀರು ಇಟ್ಟರು. ರಾಜನ ಆಜ್ಞೆಯಂತೆ ವಿಜಯಕುಮಾರನನ್ನೂ, ಅವನ ನೂರು ಸ್ನೇಹಿತರನ್ನೂ ಹಡಗಿಗೆ ತಂದರು. ಅವರನ್ನು ಹಡಗಿನೊಳಗೆ ಕಳುಹಿಸುವ ಮುನ್ನ ರಾಜನೆಂದ: "ಈ ಹಡಗು ನಿಮ್ಮನ್ನು ಲಂಕೆಗೆ ಒಯ್ಯುತ್ತದೆ. ಅಲ್ಲಿ ಅಪಾಯಕಾರಿ ಯಕ್ಷಿಣಿಯರಿದ್ದಾರೆ. ಅವರ ಮೇಲೆ ವಿಜಯ ಸಾಧಿಸಿ ಲಂಕಾವನ್ನು ಆಳಿ. ನಿಮ್ಮ ಉತ್ತರೋತ್ತರ ಅಭಿವೃದ್ಧಿಯಾಗಲಿ."

ಹಡಗು ಹೊರಟಿತು. ಬಂಗಾಳ ಕೊಲ್ಲಿಯಿಂದ ಹೊರಟ ನಾವೆ ಲಂಕಾ ತಲುಪುವಾಗ ಇನ್ನೂ ಒಂದು ತಿಂಗಳು ಮುಗಿದಿರಲಿಲ್ಲ. ನಾವೆಯಲ್ಲಿ ಒಂದು ತಿಂಗಳ ಗಟ್ಟಿ ಆಹಾರ ಇದ್ದುದರಿಂದ ಯಾರೂ ಹಸಿವಿನಿಂದ ಸತ್ತಿರಲಿಲ್ಲ. ವಿಜಯಕುಮಾರನ ನೇತೃತ್ವದಲ್ಲಿ ನೂರು ಜನ ದಾಂಡಿಗರು ಶಸ್ತ್ರಸಜ್ಜಿತರಾಗಿ ದ್ವೀಪಕ್ಕೆ ಕಾಲಿಟ್ಟರು. ಇವರನ್ನೆದುರಿಸಲು ಯಕ್ಷಿಣಿಯರು ಈಟಿ ಹಿಡಕೊಂಡು ಬಂದರು; ಇವರ ರೂಪ, ಗಂಡುತನದ ನಿಲುವು ನೋಡಿ ಶರಣಾದರು. ಒಬ್ಬೊಬ್ಬ ದಾಂಡಿಗನಿಗೂ ಏನಿಲ್ಲವೆಂದರೂ ಒಂದು ಡಜನ್ನು ಯಕ್ಷಿಣಿಯರು! ಅವರಿಗೆ ಜನಿಸಿದವರೆ ಲಂಕಾದ ಮೂಲ ನಿವಾಸಿಗಳು" ಹಾಗೆ ಒಂದು ರಾಷ್ಟ್ರದ ಉದಯವಾಯಿತು.



"ಮತ್ತೆ ನೀವು ತಮಿಳರು ಅಲ್ಲಿಗೆ ಹೋಗಿ ನೆಲೆಗೊಂಡದ್ದು ಯಾವಾಗ?"

"ಬಹಳ ಹಿಂದೆ ಶ್ರೀರಾಮ ರಾವಣನನ್ನು ಕೊಂದು ವಿಭೀಷಣ ರಾಜ್ಯ ಸ್ಥಾಪಿಸಿದ ಮೇಲೆ ಮೊದಲ ವಲಸೆ ಆರಂಭವಾಯಿತಂತೆ. ಆಗ ರಾಮ ಕಟ್ಟಿದ ಸೇತುವೆ ಇದ್ದುದರಿಂದ ಲಂಕೆಗೆ ಹೋಗುವುದು ಸುಲಭವಾಗಿತ್ತು. ಆಮೇಲೆ, ಬ್ರಿಟಿಷರು ಭಾರತವನ್ನು ಆಳುತ್ತಿದ್ದರಲ್ಲಾ? ಆಗ ಲಂಕೆಯೂ ಅವರ ವಸಾಹತು ಆಗಿತ್ತು. ಆ ಕಾಲದಲ್ಲಿ ಲಂಕಾದಲ್ಲಿ ಕಾರ್ಮಿಕರಾಗಿ ದುಡಿಯಲು ಭಾರತೀಯರನ್ನು ಅಲ್ಲಿಗೆ ಕರೆದೊಯ್ದರು. ಮತ್ತೆ ತಮಿಳರು ಸರಾಗವಾಗಿ ಲಂಕಾಕ್ಕೆ ಹೋಗತೊಡಗಿದರು. ಕೆಲವರು ಅಲ್ಲೇ ನಿಂತು ಲಂಕಾದ ಅಭಿವೃದ್ಧಿಗೆ ಕಾರಣರಾದರು."

"ತಮಿಳರಿಗೂ ಲಂಕನ್ನರಿಗೂ ಹೋರಾಟ ಆರಂಭವಾದದ್ದು ಯಾಕೆ?"

"ತಮಿಳರು ಲಂಕನ್ನರಿಗಿಂತ ಹೆಚ್ಚು ಕಷ್ಟಸಹಿಷ್ಣುಗಳು. ಅವರು ಬದುಕನ್ನು ಚೆನ್ನಾಗಿ ಕಟ್ಟಿಕೊಂಡರು. ಸರಕಾರಿ ವಿಭಾಗಗಳಲ್ಲಿ ಕೆಲಸಗಳನ್ನು ಗಿಟ್ಟಿಸಿಕೊಂಡರು. ಲಂಕನ್ನರಿಗಿಂತ ಉತ್ತಮ ಜೀವನ ಸಾಗಿಸತೊಡಗಿದರು. ಇದನ್ನು ಸಹಿಸದ ಕೆಲವು ರಾಜಕಾರಣಿಗಳು ತಮ್ಮ ಬೇಳೆ ಬೇಯಿಸುವುದಕ್ಕಾಗಿ ಲಂಕನ್ನರನ್ನು ತಮಿಳರ ವಿರುದ್ಧ ಎತ್ತಿ ಕಟ್ಟಿದರು. ನಾವು ನಮ್ಮನ್ನು 'ತಮಿಳ್ ಪುಲಿಗಳ್' ಎಂದು ಕರೆದುಕೊಂಡರೆ ಅವರು ತಮ್ಮನ್ನು ಲಂಕಾ ಸಿಂಹಗಳು ಎಂದು ಕರಕೊಂಡರು. ಧ್ವಜದಲ್ಲೂ ಕತ್ತಿ ಹಿಡಿದ ಸಿಂಹವನ್ನು ಚಿಹ್ನೆಯಾಗಿ ಹಾಕಿಕೊಂಡರು. ಇನ್ನು ಹೋರಾಟ ಆರಂಭವಾದದ್ದು ಯಾವಾಗೆಂದು ಖಚಿತವಾಗಿ ಗೊತ್ತಿಲ್ಲ. ವಿಜಯಕುಮಾರನ ಸಂತತಿಯವರೇ ನಿಜವಾದ ಲಂಕನ್ನರು. ನೀವು ತಮಿಳರು ವಲಸೆ ಬಂದವರು. ನೀವು ಹಿಂದಕ್ಕೆ ಹೋಗಿ ಎಂದು ಹೇಳತೊಡಗಿದರು. ಆಗ ನಾವು ನೀವು ಕೂಡಾ ವಂಗ ದೇಶದಿಂದ ವಲಸೆ ಬಂದವರು. ಮೂಲತಃ ನೀವು ಕೂಡಾ ಭಾರತೀಯರೇ. ಹಾಗಾಗಿ, ನಮಗೆ ತಮಿಳರಿಗೆ ಲಂಕಾದ ಮೇಲೆ ನಿಮ್ಮಷ್ಟೇ ಅಧಿಕಾರವಿದೆ – ಎಂದು ವಾದಿಸಿದೆವು. ದಕ್ಷಿಣ ಲಂಕಾದಲ್ಲಿ ಲಂಕನ್ನರು, ಉತ್ತರ ಲಂಕಾದಲ್ಲಿ ತಮಿಳರು ಪ್ರಬಲರಾದರು. ಆಗಾಗ ಘರ್ಷಣೆಗಳಾಗುತ್ತಿದ್ದವು.